
# ಸೇವೆಯ ಆಧ್ಯಾತ್ಮಿಕ ನೆಲೆ-ಸೆಲೆ ಶ್ರೀರಾಮಕೃಷ್ಣ

ಎಚ್. ಎನ್. ಸೋಮಸುಂದರಂ



ಸೇವೆಯೆಂದರೆ ಆರಾಧನೆ. ಸೇವಕ ಎಂಬ ಪದಕ್ಕೆ ಕಿಟೆಲ್ ನಿಘಂಟು 'Worshipper' ಎಂಬುದಾಗಿ ಅರ್ಥವನ್ನು ಕೊಡುತ್ತದೆ. 'ದಾಸ' ಎಂಬ ಪದವು ವೈಷ್ಣವರಲ್ಲಿ 'ಹರಿದಾಸ' ಎಂಬ ಭಾವನೆಯನ್ನೂ ವೀರಶೈವ ಸಾಹಿತ್ಯದಲ್ಲಿ 'ದಾಸೋಹ' ಎಂಬ ಭಾವನೆಯನ್ನೂ ಹೊಂದಿದೆ. ಇವೆರಡರ ಅರ್ಥ ಭಗವಂತನಿಗೆ ಅರ್ಪಿತ ವಾದದ್ದು ಎಂದಾಗುತ್ತದೆ. ಹೀಗೆ ಸಮರ್ಪಿಸಿ ಕೊಂಡ ಆಂಜನೇಯನ ಶ್ರೀರಾಮಭಕ್ತಿ ಮತ್ತು ಆಧ್ಯಾತ್ಮಿಕ ಸಂಬಂಧವು 'ದಾಸ್ಯಭಾವ' ಎಂದು ವರ್ಣಿತವಾಗಿದೆ. ಶ್ರೀರಾಮಕೃಷ್ಣರು ಅದನ್ನು ತಮ್ಮ ಜೀವನದಲ್ಲಿ ಸಾಧಿಸಿ ತೋರಿಸಿದ್ದಾರೆ.

ಸೇವೆಯು ಭೌತಿಕಕ್ರಿಯೆಯಲ್ಲಿ ವ್ಯಕ್ತ ವಾದರೂ ಅದರ ಪರಿಣಾಮ ಮುಖ್ಯವಾಗಿ ಆಧ್ಯಾತ್ಮಿಕ ಉನ್ನತಿಯಲ್ಲಿ ಫಲಿತವಾಗುವುದನ್ನು ನಾವು ಕಾಣುತ್ತೇವೆ. ಹೇಗೆಂದರೆ ಸೇವೆಯಲ್ಲಿ ಹಸಿದವನಿಗೆ ತುತ್ತು ಅನ್ನ ಕೊಡುವುದೂ ಆಧ್ಯಾತ್ಮಿಕ ಕ್ರಿಯೆಯಾಗುವುದು. ಈ ಕ್ರಿಯೆಯಲ್ಲಿ ಆತನ ದೇಹ, ಮನಸ್ಸು, ಬುದ್ಧಿ ಎಲ್ಲವೂ ಆತ್ಮನ ಆಧಾರದಲ್ಲಿ ಕೆಲಸ ಮಾಡುವುವು. ಸೇವೆ ಮಾಡುವ ಕ್ಷೇತ್ರಗಳೆಂದರೆ ಸಾಮಾನ್ಯವಾಗಿ **ದೈಹಿಕ, ಮಾನಸಿಕ, ಬೌದ್ಧಿಕ, ನೈತಿಕ ಮತ್ತು ಆಧ್ಯಾತ್ಮಿಕ** ಎಂದು ಹೇಳಬಹುದು. ಉದಾಹರಣೆಗೆ ಒಬ್ಬ ರೋಗಿಗೆ ಔಷಧೋಪಚಾರ ಮಾಡಿದರೆ ಅದು **ದೈಹಿಕ,** ಅವನಿಗೆ ಹೇಳುವ ಸಾಂತ್ವನ **ಮಾನಸಿಕ,** ವಿವೇಕದ ಮಾರ್ಗದರ್ಶನ **ಬೌದ್ಧಿಕ,** ಅವನಿಗೆ ನೀಡುವ ಧೈರ್ಯವು **ನೈತಿಕ** – ಹೀಗೆ ಒಂದೇ ಕ್ರಿಯೆಯಲ್ಲಿ ಹಲವು ಸೇವೆಗಳು ಸಂದಿರುತ್ತವೆ. ಇದನ್ನು ಭಗವಂತನ ಆರಾಧನೆಯ ದೃಷ್ಟಿಯಲ್ಲಿ, ಆಧ್ಯಾತ್ಮಿಕ ಮನೋಭಾವದಲ್ಲಿ ಮಾಡಿದರೆ ಮಾತ್ರ ಅದು ನಿಜವಾದ ಸೇವೆಯಾಗುತ್ತದೆ. ಇಲ್ಲದಿದ್ದರೆ ಕೇವಲ ಕರ್ಮ ವಾಗುತ್ತದೆ. ಆದರ್ಶ ಸೇವೆಯೇ ಕರ್ಮಯೋಗವಾಗುತ್ತದೆ.

**ಭಾ**ರತೀಯ ಆಧ್ಯಾತ್ಮಿಕ ಪ್ರಪಂಚದಲ್ಲಿ ಸೇವೆಯು ಒಂದು ಗಣ್ಯ ಪವಿತ್ರ ಸ್ಥಾನವನ್ನು ಗಳಿಸಿದೆ. ಅದು ಧರ್ಮದ ಆಧಾರಗಳಲ್ಲಿ ಒಂದಾಗಿ ಸತ್ಯ, ಪ್ರೇಮಗಳ ವ್ಯಾಪ್ತಿ ಪಡೆದುಕೊಂಡು ಮಾನವ ಜೀವನವನ್ನು ಸಾರ್ಥಕಪಡಿಸಿಕೊಳ್ಳಲು ಒಂದು ಒಳ್ಳೆಯ ಸಾಧನ ವಾಗಿದೆ. ಅಂತಹ ಸೇವೆಯ ಹತ್ತು ಹಲವಾರು ಮುಖಗಳನ್ನು, ಅದು ಶ್ರೀರಾಮಕೃಷ್ಣ, ವಿವೇಕಾನಂದರ ದಿವ್ಯ ಜೀವನದಲ್ಲಿ ಅರಳಿದ ಸೊಬಗನ್ನು ಮತ್ತು ಈ ಪ್ರಕ್ರಿಯೆಯಲ್ಲಿ ಹೊರಹೊಮ್ಮುವ ಅನುಷ್ಠಾನ ಸಂದೇಶವನ್ನು ಮನನ ಮಾಡುವುದೇ ಒಂದು ಸುಯೋಗ.

ಶ್ರೀರಾಮಕೃಷ್ಣರ ಜೀವನದ ಬೆಳಕಿನಲ್ಲಿ ಸೇವೆಯ ಪರಿಭಾಷೆ ಯನ್ನು ಈ ಲೇಖನದಲ್ಲಿ ವಿಶ್ಲೇಷಿಸಲಾಗಿದೆ. ಮಾನ್ಯ ಲೇಖಕರು ಗಿರಿಜನರ ಕಲ್ಯಾಣದಲ್ಲಿ ಸೇವೆ ಸಲ್ಲಿಸಿದವರು. ಇವರ ಹಲವು ಲೇಖನಗಳು ಈ ಪತ್ರಿಕೆಯಲ್ಲಿ ಪ್ರಕಟವಾಗಿವೆ. ಇವರು ಬೆಂಗಳೂರು ರಾಮಕೃಷ್ಣ ಮಠದ ಭಕ್ತರು.

ಶೇಕ್ಸ್‌ಪಿಯರ್‌ನ **'ವೆನಿಸಿನ ವರ್ತಕ'** ನಾಟಕದಲ್ಲಿ ಕರುಣೆಯು ದ್ವಿವಿಧ ಧನ್ಯವೆಂದು ವರ್ಣಿತವಾಗಿದೆ. ಅದರಂತೆ ಸೇವೆಯು ಸಹ "ದ್ವಿ-ಧನ್ಯತೆ' ಯನ್ನು ಹೊಂದಿದೆ. ಅದು ಕೊಡುವವನು, ಪಡೆಯುವವನು – ಇಬ್ಬರನ್ನೂ ಧನ್ಯರನ್ನಾಗಿ ಮಾಡುತ್ತದೆ. ಕೊಡುವವನು ಆರಾಧನೆಯ ಭಾವನೆಯಿಂದ ಧನ್ಯತೆಯನ್ನು

ಪರಮಹಂಸರು ಪ್ರಾಪಂಚಿಕ ಜೀವಿತವನ್ನು ಮೀರಿ ಊರ್ಧ್ವಮುಖಿಯಾಗುವ ರೆಕ್ಕೆಗಳನ್ನು ಹೊಂದಿದ್ದರು. ಆದರೆ ಅವರು ಇತರ ಮಹಾತ್ಮರಂತೆ ಸಂಕಟಗಳಿಂದ ಪಾರಾಗಲು ಈ ಬದುಕಿನಿಂದ ತಮ್ಮನ್ನು ಬೇರ್ಪಡಿಸಿಕೊಳ್ಳಲಿಲ್ಲ. ಅದಕ್ಕೆ ಕಾರಣ ಅವರ ವಿಶ್ವಪ್ರೇಮ. ಭಗವತ್ಸಾಕ್ಷಾರದ ದೃಷ್ಟಿ ಮೊದಲನೆಯ ದೃಷ್ಟಿಯಾದರೆ, ಇದು ಎರಡನೆಯ ದೃಷ್ಟಿ ಯಂತಿತ್ತು. ಅದು ಅವರಿಗೆ, ಜೀವಿಗಳ ಕಷ್ಟಕಾರ್ಪಣ್ಯಗಳನ್ನು ಕಂಡಾಗ ಮಿಂಚಿನಂತೆ ಹೊಳೆದಿತ್ತು. ಅದೇ 'ಜೀವನೇ ಶಿವ' ನೆಂಬ ದೃಷ್ಟಿ – ಜೀವಿಗಳೆಲ್ಲ ಭಗವಂತನೇ – ಭಗವಂತನನ್ನು ಪ್ರೀತಿಸುವವರು ಮೊದಲು ಸಂಕಷ್ಟದಲ್ಲಿ ಸಿಲುಕಿರುವ ಅವನ ಸ್ವರೂಪದ ಜೊತೆಗೆ, ಆ ನೋವು, ಲೋಪ, ಪ್ರಮಾದಗಳ ಹಾಗೂ ಮಾನವ ಸ್ವಭಾವದ ಭಯಾನಕ ಅಂಶಗಳ ಮಧ್ಯೆಯೂ, ತಾದಾತ್ಮ್ಯ ಹೊಂದಬೇಕು (ಇದೇ ಶ್ರೀರಾಮ ಕೃಷ್ಣರ ಆಶಯವಾಗಿತ್ತು). – **ರೋಮೇ ರೋಲಾ**

ಗಳಿಸಿದರೆ, ಪಡೆಯುವವನು ಕೃತಜ್ಞತಾಭಾವದ ಮೂಲಕ, ಭಗವಂತನೇ ಸೇವಾಕರ್ತನಾಗಿ ಬರುವವನು ಎಂದು ತಿಳಿದು ಕೊಂಡು, ಮಾನವರಲ್ಲಿ ದೇವರನ್ನು ಕಾಣುವ ಮೂಲಕ ಧನ್ಯತೆ ಯನ್ನು ಗಳಿಸುತ್ತಾನೆ. ಪ್ರಾಣಿಗಳಲ್ಲಿಯೂ ಕಂಡುಬರುವ ಈ ಕೃತಜ್ಞತಾಭಾವವು ದುರದೃಷ್ಟವಶಾತ್ ಮಾನವರಲ್ಲಿ ನಶಿಸುತ್ತಿದ್ದು ಸಂವೇದನಾಶೀಲತೆಯೇ ಮಾಯವಾಗುತ್ತಿದೆ. ಫಲಾಹಾರ ಮಂದಿರಕ್ಕೆ ಹೋಗಿ ದುಡ್ಡು ತೆತ್ತು ಪ್ರತಿಷ್ಠೆಯ ಟಿಪ್ಸನ್ನು ಇಟ್ಟು ಬರುವ ಒಬ್ಬ ನಾಗರಿಕನು, ಅಮೂಲ್ಯವಾದ ಗಾಳಿ, ನೀರು ಇತ್ಯಾದಿಗಳನ್ನು ಕೊಟ್ಟು ಕಾಪಾಡುವ ಭಗವಂತನನ್ನು ಸ್ಮರಿಸುವುದೇ ಇಲ್ಲ. ಭಗವಂತನನ್ನೇ ಸ್ಮರಿಸದ ಈ ಮನುಷ್ಯನು ಇನ್ನು ಮಾನವ ರೂಪಿ ದೇವರಿಗೆ ಯಾವ ರೀತಿ ತಾನೇ ಕೃತಜ್ಞತೆ ತೋರಬಲ್ಲ?

ಹೀಗೆ ಸೇವೆ ಮಾಡುವವನು, ಸ್ವೀಕರಿಸುವವನು ಇಬ್ಬರೂ ಆರಾಧನೆಯ ಭಾವವನ್ನು ತ್ಯಜಿಸಿದರೆ, ಕೊಡುವವನು ತಾನು ದಯೆ ತೋರುತ್ತಿರುವೆನೆಂದೂ, ಸ್ವೀಕರಿಸುವವನು ಯಾವನೋ ಯಃಕಶ್ಚಿತ್ ಮಾನವ ತನಗೇನೋ ನೀಡುತ್ತಿರುವನೆಂದೂ ಭಾವಿಸಿ ಕೊಳ್ಳುವ ಅಪಾಯವಿದೆ.

ಈ ಅಜ್ಞಾನವನ್ನೇ ನಿಖರವಾಗಿ ಗುರುತಿಸುವ ಶ್ರೀರಾಮ ಕೃಷ್ಣರು ಇದಕ್ಕೆ ನೀಡುವ ಪರಿಹಾರದ ಪ್ರಸಿದ್ಧ ನುಡಿ ಹೀಗಿದೆ: "ಜೀವದಯೆ! ಯಃಕಶ್ಚಿತ್ ಕ್ರಿಮಿ, ಜೀವದಯೆ ತೋರಲು ನೀನಾರೋ? ಜೀವದಯೆಯಲ್ಲ, ಶಿವನ ಸೇವೆ!" ಅನುಷ್ಠಾನ ದಲ್ಲಿ ಅದ್ವಿತೀಯರಾದ ಶ್ರೀರಾಮಕೃಷ್ಣರ ಈ ಸಂದೇಶವೇ ಅವರ ಜೀವನದಲ್ಲಿ ಹಾಸುಹೊಕ್ಕಾಗಿದೆ. ಅವರೆಂದೂ ತಾವು ದಯೆ ತೋರುವವರೆಂದು ಭಾವಿಸಲಿಲ್ಲ. ವಂಗಹೃದಯ ಗೋಮುಖಿ ಯಿಂದ ಕರುಣಾಗಂಗೆ ಸತತವಾಗಿ ಹರಿಯುತ್ತಿದ್ದರೂ ತಮ್ಮದು ಆರಾಧನೆಯೆಂದೇ ಭಾವಿಸಿ ನಡೆಸಿದರು. ಯಾವ ಮಹಾತ್ಮರ ವಿಚಾರ ತಿಳಿದರೂ ತಾವೇ ಹೋಗಿ ಸಂದರ್ಶಿಸಿದ ಸಂದರ್ಭ ಗಳೆಷ್ಟು! ಅತ್ಯಂತ ಸಾಮಾನ್ಯ ಜನರಿಗೂ ಅವರು ತೋರಿದ ಪ್ರೇಮ ಎಂತಹುದು! ಇದನ್ನು ಪೂರ್ಣವಾಗಿ ಗ್ರಹಿಸಿದ ಸ್ವಾಮಿ ವಿವೇಕಾನಂದರು ಹಿಂದಿನ "ಮಾತೃದೇವೋಭವ" ಇತ್ಯಾದಿ ಗಳನ್ನು ಸ್ವಲ್ಪ ಕಾಲಕ್ಕೆ ಬದಿಗಿಟ್ಟು "ದೀನದೇವೋ ಭವ! ದರಿದ್ರ ದೇವೋ ಭವ! ಪಾಪಿದೇವೋ ಭವ!" ಎಂಬ ಹೊಸ ಉಪನಿಷತ್ತನ್ನು ಕೊಟ್ಟರು. ಅಂದಿನ ಭಾರತಕ್ಕೆ ಅವಶ್ಯವಾಗಿ ಬೇಕಾಗಿದ್ದ ಸೇವಾದೀಕ್ಷೆಯನ್ನು ನೀಡಿದರು.

ರಾಮಕೃಷ್ಣ ಮಹಾಸಂಘವು ಸ್ಥಾಪನೆಗೊಳ್ಳುತ್ತಿದ್ದ ಕಾಲದಲ್ಲಿ ಕೆಲವರು ಗುರುಭಾಯಿಗಳು ಒಂದು ಪ್ರಶ್ನೆಯನ್ನು ವಿವೇಕಾನಂದರ ಮುಂದಿಟ್ಟರು: "ಈ ಸಂಘ, ನಿಯಮ, ರೀತಿನೀತಿಗಳು ಕಾರ್ಯ ಕ್ರಮಗಳು ಪಾಶ್ಚಿಮಾತ್ಯವಾಗಿ ಕಾಣಿಸುತ್ತಿವೆ. ಶ್ರೀರಾಮಕೃಷ್ಣರು ಅಂತಹ ಬೋಧನೆಯನ್ನೇನಾದರೂ ತಮಗೆ ಬಿಟ್ಟುಹೋದರೇ?" ಅದಕ್ಕೆ ವಿವೇಕಾನಂದರು ಕೊಟ್ಟ ಉತ್ತರ ಕಣ್ತೆರೆಸುವಂತಿದೆ:

"ಶ್ರೀರಾಮಕೃಷ್ಣರು ಬೋಧಿಸಿದ ಆಧ್ಯಾತ್ಮಿಕ ಜೀವನ, ಏಕಾಗ್ರತೆ, ಧ್ಯಾನ ಮತ್ತು ಇತರ ಉನ್ನತ ಧಾರ್ಮಿಕ ಸತ್ಯಗಳನ್ನು ನಾವು ಸಾಕ್ಷಾತ್ಕಾರ ಮಾಡಿಕೊಂಡು ಜನರಿಗೆ ಬೋಧಿಸಬೇಕು. ಗುರಿಯನ್ನು ಸೇರಲು ದಾರಿಗಳು ಅನಂತ. ನಾನು ಹೊಸ ಪಂಥವನ್ನು ಸೃಷ್ಟಿ ಮಾಡಲು ಹುಟ್ಟಲಿಲ್ಲ. ನಾವೆಲ್ಲರೂ ಶ್ರೀರಾಮಕೃಷ್ಣರ ಪಾದಗಳಲ್ಲಿ ಆಶ್ರಯ ಪಡೆದಿರುವುದೇ ಒಂದು ಧನ್ಯತೆ. ನಮಗೆ ದೊರೆತ, ಕೈಗೆ ಬಂದಿರುವ ಜ್ಞಾನವನ್ನು ನಾವು ಧಾರಾಳವಾಗಿ ಪ್ರಪಂಚಕ್ಕೆ ಕೊಡಬೇಕು."

"ಶ್ರೀರಾಮಕೃಷ್ಣರ ಕೃಪೆಯ ಕುರುಹುಗಳನ್ನು ನಾನು ಮತ್ತೆ ಮತ್ತೆ ಪಡೆದಿದ್ದೇನೆ. ಅವರೇ ಹಿಂದೆ ನಿಂತು, ಈ ಕೆಲಸವನ್ನೆಲ್ಲ ನನ್ನಿಂದ ಮಾಡಿಸುತ್ತಿದ್ದಾರೆ. ಹಸಿವಿನಿಂದ ಬಳಲಿ ಮರದ ಕೆಳಗೆ ಮಲಗುತ್ತಿದ್ದಾಗ, ಕೌಪೀನಕ್ಕೆ ತುಂಡು ಬಟ್ಟೆಗೂ ಕಷ್ಟವಾದಾಗ, ಕೈಯಲ್ಲಿ ಬಿಡಿಗಾಸಿಲ್ಲದೆ ಪ್ರಪಂಚವನ್ನೆಲ್ಲಾ ಸುತ್ತಲು ನಿರ್ಧರಿಸಿದ್ದಾಗ ಅವರ ಕೃಪೆಯಿಂದ ಎಲ್ಲ ವಿಧಗಳಲ್ಲಿಯೂ ನಾನು ಸಹಾಯ ಪಡೆದೆ. ಹಾಗೆಯೇ ಚಿಕಾಗೋ ನಗರದ ಬೀದಿಗಳಲ್ಲಿ ವಿವೇಕಾ ನಂದರ ಒಂದು ದರ್ಶನ ಪಡೆದರೆ ಸಾಕು ಎಂದು ಜನ ಕಿಕ್ಕಿರಿದಿದ್ದಾಗ ಬಂದ ಮನ್ನಣೆ, ಅದರಲ್ಲಿ ಶತಾಂಶದಿಂದಲೇ ಯಾರ ತಲೆಯಾದರೂ ತಿರುಗುವಂತಿದ್ದಾಗ, ಆ ಕೀರ್ತಿಯನ್ನು ಅರಗಿಸಿಕೊಳ್ಳಲು ನಾನು ಸಮರ್ಥನಾದುದು ಅವರ ಆಶೀರ್ವಾದ ದಿಂದಲೇ. ಈಗ ದೇಶಕ್ಕಾಗಿ ಸ್ವಲ್ಪ ಕೆಲಸ ಮಾಡಬೇಕೆಂದಿರುವೆ. ನೀವೆಲ್ಲಾ ಸಂಶಯ ಮತ್ತು ತಪ್ಪು ಗ್ರಹಿಕೆಗಳನ್ನು ತ್ಯಜಿಸಿ ನನ್ನ ಕೆಲಸದಲ್ಲಿ ಸಹಾಯ ಮಾಡಿದರೆ ಶ್ರೀರಾಮಕೃಷ್ಣರ ಕೃಪೆಯಿಂದ ಹೇಗೆ ಅದ್ಭುತ ಕಾರ್ಯಗಳಾಗುತ್ತವೆ ಎಂದು ಕಣ್ಣಾರೆ ಕಾಣುವಿರಿ."

"ನಿಜವಾದ ವಿಚಾರವೆಂದರೆ ಇದೇ: ಶ್ರೀರಾಮಕೃಷ್ಣರು ಅವರ

ಶಿಷ್ಯರು ತಿಳಿದಿರುವುದಕ್ಕಿಂತ ಎಷ್ಟೋ ಪಟ್ಟು ದೊಡ್ಡವರು. ಅವರ ಒಂದೇ ಒಂದು ಕೃಪಾಕಟಾಕ್ಷವು ಲಕ್ಷಾಂತರ ವಿವೇಕಾನಂದರನ್ನು ಕ್ಷಣದಲ್ಲಿಯೇ ಸೃಷ್ಟಿಸಬಲ್ಲುದು. ಆದರೆ ಈಗ ಅವರು ನನ್ನನ್ನು ಅವರ ಒಂದು ಉಪಕರಣವಾಗಿ ಮಾಡಿ ಕೆಲಸ ಮಾಡಬೇಕೆಂದು ಇಚ್ಛಿಸಿದರೆ, ನಾನು ಅವರ ಇಚ್ಛೆಗೆ ವಿನಮ್ರವಾಗಿ ತಲೆಬಾಗುವುದನ್ನು ಮಾತ್ರ ಮಾಡಬಲ್ಲೆ."

ವಿವೇಕಾನಂದರ ಒಬ್ಬ ಪ್ರತ್ಯಕ್ಷ ಶಿಷ್ಯರು ಹೀಗೆ ಬರೆಯುತ್ತಾರೆ: "ಶ್ರೀರಾಮಕೃಷ್ಣ ಶಿಷ್ಯವೃಂದದಲ್ಲಿ ಶ್ರೀರಾಮಕೃಷ್ಣರನ್ನು ಒಬ್ಬ ವ್ಯಕ್ತಿಯಾಗಿ ಮಾತ್ರ ಕಾಣದೆ ಒಂದು ತತ್ತ್ವವನ್ನಾಗಿ, ಸಾಕ್ಷಾತ್ಕಾರ ವೈರಾಗ್ಯಗಳ ಮೂರ್ತಿಯನ್ನಾಗಿ ಮಾತ್ರವಲ್ಲದೆ, ಮಾನವ ಕೋಟಿಯ ಸೇವೆಯಲ್ಲಿ ಆರಾಧನಾ ಭಾವದ ದೇವದೂತನಾಗಿ ಕಂಡುಕೊಂಡವರೆಂದರೆ ಅವರು ಸ್ವಾಮಿ ವಿವೇಕಾನಂದರೇ! ಮಾನವ ಜನಾಂಗದ ಸೇವೆಗಾಗಿ ಗುರುಮಹಾರಾಜರು ತಮ್ಮ 'ಬ್ರಹ್ಮಾನಂದ' ವನ್ನೇ ತ್ಯಜಿಸಲಿಲ್ಲವೇ?"

ಈ ತ್ಯಾಗವನ್ನೇ ಮುಂದುವರಿಸಿ ಆಚರಿಸಿದವರು ಅವರ ಶಿಷ್ಯರು! "ನೀನು ದೊಡ್ಡ ಆಲದ ಮರವಾಗಿ ಜನರಿಗೆ ಸಾಂತ್ವನ ನೀಡಬೇಕಾಗಿದೆ" ಎಂಬ ಶ್ರೀರಾಮಕೃಷ್ಣರ ನುಡಿಯನ್ನೇ ಶಿರಸಾ ವಹಿಸಿ, ನಿರ್ವಿಕಲ್ಪ ಸಮಾಧಿಯನ್ನು ಬದಿಗಿಟ್ಟು, ಸೇವೆಗಾಗಿ ನಿಂತವರು ಸ್ವಾಮಿ ವಿವೇಕಾನಂದರು. ಭೌತಿಕ ಸೇವೆಯನ್ನು ಅವರು ಕಡೆಗಣಿಸದಿದ್ದರೂ ಅವರು ಮಾಡಿದ ಮಹಾನ್ ಸೇವೆಯೆಂದರೆ ಆಧ್ಯಾತ್ಮಿಕ ಜಾಗೃತಿ. ಅವರು ಸೋದರಿ ನಿವೇದಿತಾರಿಗೆ ಬರೆದ ಪತ್ರ ಹೀಗಿತ್ತು:

"ನುಡಿಗಳೆರಡರಲ್ಲಿ ಅರುಹೆ, ಇದುವೆ ನನ್ನ ಆದರ್ಶ–
ಮನುಜಕುಲಕೆ ತಮ್ಮೊಳಿರ್ಪ ದಿವ್ಯಭಾವ ಬೋಧೆಗೈದು
ಅದನು ಬಾಳಯಾತ್ರೆಯಲ್ಲಿ, ಅಡಿಗು ಅಡಿಗು ಬೆಳಗಿಸಲ್ಕೆ
ತದನುರೂಪ ಪಥಗಳನ್ನು ತೋರಿಕೊಡುವ ಯತ್ನ–ಕೃತಿಯು
'ಏಳಿರೇಳಿ' ಎಂದು ಕರೆವ, ಎಲ್ಲ ಜಗವ ಕೂಗಿ ಕರೆವ
ಸುಪ್ತದೈವರೆಲ್ಲ ಕೇಳಿ ಎದ್ದು ಬರುವವರೆಗೆ ಕರೆವ
ಅಂತರಾತ್ಮ ದಿವ್ಯ ಆತ್ಮ ಒಗೊಡುವವರೆಗೆ ಕರೆವ
ಇದುವೆ ಬಾಳ ಹಿರಿಯ ಕರ್ಮ, ಪರಮ ಸೇವೆ,
ಮಹಾನ್ ಧರುಮ.

(ಸ್ವಾಮಿ ಶಾಸ್ತ್ರಾನಂದರ 'ಕೂಗಿ ಕರೆಯುವಾ!' ಕವನದಿಂದ)

ಶ್ರೀರಾಮಕೃಷ್ಣರ ಮಾನವಾನುಕಂಪ ಮತ್ತು ಸೇವಾಕಾತರತೆಗಳು ಅವರ ಸಾಕ್ಷಾತ್ಕಾರದ ಭವ್ಯತೆಯಲ್ಲಿ, ಅತೀಂದ್ರಿಯ ದಿವ್ಯ ಆರೋಹಣದಲ್ಲಿ, ಎಲ್ಲರಿಗೂ ದೈವತ್ವವನ್ನು ಗಳಿಸಲು ಸಾರಿ ಹೇಳುವ ಅತ್ಯಂತ ಮನೋಜ್ಞವಾದ ಶಕ್ತಿಯುತ ಬೋಧೆಯಲ್ಲಿ ಮರೆಯಾಯಿತು. ಶ್ರೀರಾಮಕೃಷ್ಣರ ಜೀವನ ಮತ್ತು ಬೋಧನೆಯನ್ನು ಲೋಕಕ್ಕೆ ವಿವರಿಸುವ, ಅವರ ಜೀವನ ಮತ್ತು ಸೇವೆಗಳು ವಿರೋಧಿ ಭಾವನೆಗಳಲ್ಲ, ಅವು ಒಂದಕ್ಕೊಂದು ಅಡಚಣೆಗಳಲ್ಲ, ಬದಲಾಗಿ ಪೂರಕಗಳು ಎಂಬ ಭಾವನೆಯನ್ನು ವಿವೇಕಾನಂದರು ಸಾರಿದರು. ಅವರು ಕೊಟ್ಟ ಧ್ಯೇಯವಾಕ್ಯವಾದ **'ಆತ್ಮನೋ ಮೋಕ್ಷಾರ್ಥಂ ಜಗದ್ಧಿತಾಯ ಚ'** ('ಸ್ವಮುಕ್ತಿಗಾಗಿ ಮತ್ತು ಜಗತ್ತಿನ ಹಿತಕ್ಕಾಗಿ') ಎಂಬುದು ಇದನ್ನೇ ಹೇಳುತ್ತದೆ. ಇದುವೆ ಶ್ರೀರಾಮಕೃಷ್ಣರ ಸೇವೆಯ ಆದರ್ಶ, ಗುರುವಿನಲ್ಲಿ ಮೊಗ್ಗಾಗಿ ಶಿಷ್ಯರಲ್ಲಿ ಅರಳಿದ ಅಪೂರ್ವ ಕುಸುಮ.

## ಶ್ರೀರಾಮಕೃಷ್ಣ ನಾಮಮಹಿಮೆ

ಶ್ರೀರಾಮಕೃಷ್ಣರ ಹೆಸರಿನ ಹಿಂದೆ ಆಳವಾದ ಅರ್ಥವಿದೆ. **'ರಮಂತೇ ಯೋಗಿನಃ ಅಸ್ಮಿನ್ ಇತಿ ರಾಮ'** – ಯೋಗಿಗಳಿಗೆ ಅತ್ಯಾನಂದವನ್ನು ಕರುಣಿಸುವವನು 'ರಾಮ.' **ಕರ್ಷತಿ ಭಕ್ತಾನಾಂ ದುಃಖಂ ಪಾಪಂ ಮನೋ ವಾ ಇತಿ ಕೃಷ್ಣಃ** – ಭಕ್ತರ ದುಃಖ, ಪಾಪಗಳನ್ನು ಹೀರಿ ನಾಶಪಡಿಸುವನು ಅಥವಾ ಭಕ್ತರ ಮನಸ್ಸುಗಳನ್ನು ಆಕರ್ಷಿಸಿ, ತನ್ನ ಮೇಲಿನ ಭಕ್ತಿಯಲ್ಲಿ ಅವುಗಳನ್ನು ಕರಗಿಸುವವನು 'ಕೃಷ್ಣ.' ಆಯಾ ಯುಗಗಳಲ್ಲಿ ಮಾನವರ ದುಃಖಗಳನ್ನು ನಿವಾರಿಸಲೆಂದೇ ರಾಮ ಮತ್ತು ಕೃಷ್ಣರು ಅವತಾರವೆತ್ತಿದರು. ಈಗ ಅವರಿಬ್ಬರೂ ಜೊತೆಯಾಗಿ ಶ್ರೀರಾಮಕೃಷ್ಣರ ರೂಪ ತಾಳಿ ಬಂದಿದ್ದಾರೆ.

'ರಾಮ' ಎಂಬ ಹೆಸರಿನಲ್ಲಿ ಒಂದು ರಹಸ್ಯ ಇದೆ. ದಶರಥನು ಮಗುವಿಗೆ ಹೆಸರಿಡಬೇಕೆಂದಾಗ, ವಸಿಷ್ಠನು 'ರಾಮ' ಎಂಬ ಹೆಸರನ್ನು ಸೂಚಿಸುತ್ತಾನೆ. "ಇದು ಬಹಳ ಚಿಕ್ಕ ಹೆಸರು" ಎಂದು ದಶರಥನು ಆಕ್ಷೇಪಿಸಿದಾಗ, ವಸಿಷ್ಠನು ಹೀಗೆ ಹೇಳುತ್ತಾನೆ: "ಪ್ರಸಿದ್ಧವಾದ ವೈಷ್ಣವ ಮಂತ್ರವಾದ 'ನಮೋ ನಾರಾಯಣಾಯ' ದಿಂದ 'ರಾ' ಎಂಬ ಅಕ್ಷರವು ಬಂದಿದೆ. ಈ ಅಕ್ಷರವು ಆ ಮಂತ್ರದ ಸಾರ. ಹೀಗೆಯೇ 'ಮ' ಎಂಬ ಅಕ್ಷರವು ಶಿವನ ಮಂತ್ರವಾದ 'ನಮಃ ಶಿವಾಯ' ಎಂಬುದರ ಸಾರ."

'ಕೃಷ್ಣ' ಎಂಬ ಹೆಸರಿನ ಸ್ವಾರಸ್ಯ ಇದು: ಕೃಷ್ ಎಂಬ ಧಾತುವಿಗೆ 'ಅನಂತ ಅಸ್ತಿತ್ವವುಳ್ಳ ಬ್ರಹ್ಮ' ವೆಂದು ಅರ್ಥಮಾಡಬೇಕು. 'ಣ' ಎಂದರೆ ಸೌಖ್ಯ ಅಥವಾ ಆನಂದ. ಸತ್ ಅಥವಾ ಅಸ್ತಿತ್ವ ಮತ್ತು ಆನಂದ – ಇವು ಬ್ರಹ್ಮನ ಸ್ವರೂಪ ಲಕ್ಷಣಗಳು. ಇವೆರಡನ್ನು ತೆಗೆದು ಹಾಕಿಬಿಟ್ಟರೆ, ಏನೂ ಅಸ್ತಿತ್ವದಲ್ಲಿರದು ಮತ್ತು ನಾವು ಏನನ್ನೂ ಬಯಸೆವು. ಹೀಗೆ ಕೃಷ್ಣ ಎಂಬ ಪದಕ್ಕೆ ಸತ್ ಮತ್ತು ಆನಂದ ಎಂದರ್ಥ.

**'ರಾಮ' ಮತ್ತು 'ಕೃಷ್ಣ' – ಈ ಎರಡೂ ಮಹತ್ವದ ಪದಗಳು ಸೇರಿಕೊಂಡು 'ರಾಮಕೃಷ್ಣ' ಎಂದಾಗಿದೆ.**

–ಸ್ವಾಮಿ ಭಾಗವತಾನಂದ, ವಾರಾಣಸಿ, ಅನು: **ಡಾ. ಎಚ್. ಪಾಂಡುರಂಗ ವಿಠಲ**